

ಕರ್ನಾಟಕ ಕಾಲೇಜು
ಧಾರವಾಡ

ಚಿತ್ರಗಳು: ಕುಮಾರ್ ಕಾಟೇನಹಳ್ಳಿ

# ಒಂದಾನೊಂದು ಕಾಲದಾಗ... ನಡು ಮಧ್ಯಾಹ್ನದಾಗ...

ಇದು ಧಾರವಾಡ ಮಣ್ಣಿನ ಗುಣ. ಸಂಗೀತದ ತವರು, ಭಾಷೆಯ ಸೊಗಡು, ಘಮಘಮ ಪೇಡಾದ ಸವಿ... ಎಲ್ಲವೂ ಹದವಾಗಿ ಮಿಳಿತಗೊಂಡ ಸುಂದರ ನಗರಿ. ಸಾಹಿತ್ಯ ದಿಗ್ಗಜರ ಕರ್ಮಭೂಮಿಯಾದ ಧಾರವಾಡ, ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಧಾರವಾಡದ ಭಾಷೆಯೇ ಮೋಡಿ ಮಾಡವಂಥದ್ದು. ಈ ನೆಲದ ಹುಡುಗಿಯ ನಾಜೂಕುತನ, ಪ್ರೀತಿಯ ಸೆಲೆಯ ಬಗ್ಗೆ ವಿವರಿಸುತ್ತಲೇ ಲಗ್ನ ಆದ ಬಳಿಕ ಗಂಡನ ಮನೆ ಸೇರಿದ ಹೆಣ್ಣುಮಗಳ ತವಕ–ತಲ್ಲಣಗಳನ್ನು ಚಂದದ ಭಾಷೆಯಲ್ಲಿ ಕಟ್ಟಿಕೊಟ್ಟು ಧಾರವಾಡದ ಹೂರಣವನ್ನ ಓದುಗರಿಗೆ ಉಣಬಡಿಸಿದ್ದಾರೆ ಲೇಖಕಿ ಜಾಹ್ನವಿ ಹಳ್ಳೂರ, ಈ ವಾರದ 'ಚೆನ್ನುಡಿ' ಸರಣಿಯಲ್ಲಿ.

ನಮ್ಮ ಹುಡುಗೀಗೆ ಭಾಳಽ ಭಿಡೆ ಭಾಳಽ ನಾಜೂಕಿನಾಕಿ! ಅಕಿ ಕೆಲಸಾ ಮುತ್ತು ಜೋಡಿಸಿಧಂಗ... ಮಾತು ಮುತ್ತು ಉದುರಿಧಂಗ... ನಗು ಮುತ್ತು ಸುರಿಧಂಗ ಹೀಂಗ ಮುತ್ತೀಲೇಽ ಸಿಂಗಾರ ಮಾಡಿ ಆಕೀ ಲಗ್ನ ಈ ನಮ್ಮ ಹುಂಬನ ಜೋಡೀ ಮಾಡಿದ್ದರು. ಲಗ್ನಾದ ಹೊಸತು... ಇನ್ನೂ ನಮ್ಮ ಹುಡುಗಿ ಹೊಸಾ ಮನೀಗೆ ಅತೀ ಹೊಸಬಳು. ಹುಂಬನೂ ಒಳ್ಳೆಯವನೇ ಇದ್ದಿದ್ದಾನು. ನಮಗಿನ್ನೂ ಅವನ ಗುಣ ಸ್ವಭಾವ ತಿಳಿದಿಲ್ಲ ನೋಡ್ರಿ. ಆದರಽ ಅವಾ ನಮ್ಮ ಹುಡುಗೀನ್ನ ಹೆಸರು ಹಿಡಿದು ಕರಽದ ಕೂಡಲೇ ಈ ಮುತ್ತಿನ ಹುಡುಗಿಯ ಎದಿ ವಳಗ ಅವಲಕ್ಕಿ ಕುಟ್ಟಿದ ಹಾಂಗಽ ಆಗತಿತ್ತು. ಅತ್ತಿ ಮಾತ್ರ ಭಾಳ ಬಾಯಿ ಬಡಕ ಇದ್ದಳು. ಆಕೀ ಮಾತು ಹೊಟ್ಯಾಗ ನಟ್ಟು ಎದ್ಯಾಗ ಬರೋ ಹಂಗ ಇರತಿದ್ದವು. ಮಾವನ ಮಾತು ಬೆಣ್ಯಾಗಿನ ಕೂದಲ ತಗದ ಹಾಂಗ... ಆದರ ಸ್ವಭಾವ ಬೆರಕಿಯದು. ರಗಡ್ ವರದಕ್ಷಿಣಿ ಹೊಡದಿದ್ದ.

ಆದರೂ ಗಂಡನ ಮನೀಯವರು ಸಾಕಷ್ಟು ಒಳ್ಳೆಯವರೇ ಅನಬೇಕು! ಸಿರಿವಂತರಿದ್ದರು. ಹಾಲು ತುಪ್ಪಕ್ಕ ಕೊರತಿದ್ದಿದ್ದಿಲ್ಲ. ದಿನ ಬೆಳಗಾದರ ಶಿರಾ, ಸಣ್ಣ ರವಾದ್ದಽ ಉಪ್ಪಿಟ್ಟು, ತುಪ್ಪದ ಅವಲಕ್ಕಿ, ತೋಯಿಸಿದ ಅವಲಕ್ಕಿ ಮಧ್ಯಾಹ್ನದ ಊಟಕ್ಕ ಬೆಣ್ಣಿ ಮುದ್ದಿ, ಘಟ್ಟ್ ನೇ ಮಸರು ಎಲ್ಲಾ ಇರತಿತ್ತು. ಉಣಲಿಕ್ಕೆ ಉಡಲಿಕ್ಕೆ ಎಲ್ಲಾ ಇದ್ದರೂ ನಮ್ಮ ಧೊಡ್ಡ ಧ್ವನಿಯ ಹುಂಬ ಹುಡುಗಗ ಮುತ್ತಿನ ಹುಡುಗಿ ಇನ್ನೂ ಮನಸ್ ಪೂರ್ತಿ ಒಲಿದಿರಲಿಲ್ಲ. ಅಂತರ ಇತ್ತು. ವಾರಾತು, ತಿಂಗಳಾತು ಅಂತರ ಹೆಚ್ಚಽ ಆತು. ಈ ಅಂತರ ಅತ್ತಿ ಮಾವಗೂ ಯಾಕೋ ಹುರುಹುರು ಅನಸಲಿಕ್ಕೆ ಹತ್ತು. ಈ ಹುಡುಗಿ ಛಂದ ನೋಡಿ ಮಳ್ಳಾದವಿ... ಯಾಕೋ ಸರಿ ಬರವಲ್ಲದು ಅಂತ ಅನಿಸಿ... ಸ್ವಾಮಿಗೋಳ ಕಣ್ಣಿಗೊಂದಿಷ್ಟು ಈ ಹರೇದ ಹುಡುಗೂರನ್ನ ಹಾಕಿ ಅವರ ಆಶೀರ್ವಾದ ಪಡದು ಬರೋಣ ಅನ್ನಿಸಿತ್ತು. ತ್ರಯೋದಶಿಗೆ ಹೊಂಡೂ ತಯಾರಿ ಆಗಿತ್ತು.